ಕಾರುಗಳ ವ್ಯವಸ್ಥೆ ಮಾಡಬಹುದು ಎಂಬ ಬಗ್ಗೆ ವರದಿ ನೀಡಲಿದ್ದೇವೆ' ಎಂದು ಪೋಮಾ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಮಹೇಂದ್ರ ಜೈನ್ ಹೇಳುತ್ತಾರೆ.

'ಮೆಟ್ರೊ ಮಾರ್ಗದೊಂದಿಗೆ ಫೀಡರ್ ಲೈನ್‌ಗಳನ್ನಾಗಿ ಈ ಕೇಬಲ್ ಕಾರುಗಳನ್ನು ಬಳಕೆ ಮಾಡಬಹುದು. ಸರಾಸರಿ 1.5 ಕಿ.ಮೀ. ದೂರದಲ್ಲಿ ಒಂದೊಂದು ಕೇಬಲ್ ಕಾರು ನಿಲ್ದಾಣ ನಿರ್ಮಾಣ ಮಾಡಬೇಕಾಗುತ್ತದೆ' ಎಂದು ಅವರು ವಿವರಿಸುತ್ತಾರೆ.

ಕೇಬಲ್ ಕಾರುಗಳ ಸಾಧ್ಯಾಸಾಧ್ಯತೆ ಕುರಿತು ಅಧ್ಯಯನ ನಡೆಸಲು ರಾಜ್ಯ ಸರ್ಕಾರ, ಮೆಟ್ರೊ ರೈಲು ನಿಗಮದ ವ್ಯವಸ್ಥಾಪಕ ನಿರ್ದೇಶಕ ಪ್ರದೀಪ್ ಸಿಂಗ್ ಖರೋಲಾ ಅವರ ನೇತೃತ್ವದಲ್ಲಿ ಸಮಿತಿಯೊಂದನ್ನು ಈಗಾಗಲೆ ರಚಿಸಿದೆ. 'ಸಮಿತಿ ನೀಡುವ ವರದಿ ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ' ಎನ್ನುತ್ತಾರೆ ಸಚಿವ ಜಾರ್ಜ್.

ಬೆಂಗಳೂರಿನ ಈಗ ಇರುವ ರಸ್ತೆಗಳ ಮೇಲ್ಭಾಗದಲ್ಲೇ ಈ ಕೇಬಲ್ ಕಾರುಗಳು ಹರಿದಾಡಲು ಸಾಧ್ಯವಿದೆ. ಆದರೆ, ಮಾರ್ಗ ನೇರವಾಗಿರಬೇಕು. ಇಲ್ಲದಿದ್ದರೆ ಸುಗಮ ಸಂಚಾರಕ್ಕೆ ಅಡಚಣೆ ಆಗಲಿದೆ ಎಂದು ಜೈನ್ ಹೇಳುತ್ತಾರೆ. 'ಈ ಯೋಜನೆಗೆ ಎಷ್ಟು ಖರ್ಚು ಆಗಬಹುದು' ಎಂದು ಕೇಳಿದರೆ ಜೈನ್ ಅವರು ನಕ್ಕು ಬಿಡುತ್ತಾರೆ. 'ಈಗಷ್ಟೇ ಚಿಂತನೆ ಆರಂಭವಾಗಿದೆ. ಸರ್ಕಾರದ ಅನುಮತಿ ಸಿಕ್ಕು, ಸಮೀಕ್ಷೆ ಆರಂಭಿಸಿದ ಮೇಲೆ ಅದೆಲ್ಲ ಗೊತ್ತಾಗಲಿದೆ' ಎಂದು ಅವರು ಹೇಳುತ್ತಾರೆ.

ಅಂತೂ ಮೆಟ್ರೊ ಸುರಂಗ ಮಾರ್ಗದ ಮೂಲಕ ಬೆಂಗಳೂರಿನ ನೆಲದಡಿ ಜನ ಸಂಚರಿಸುವಂತೆ ಮಾಡಿದ ಸರ್ಕಾರ, ಈಗ ಆಕಾಶದಲ್ಲಿ ಜನರನ್ನು ಹಾರಾಡಿಸಲೂ ಹೊರಟಿದೆ.

**ಪೀಕೆ**



ಮಾರ್ಟಿನ್ ಜೆಟ್‌ಪ್ಯಾಕ್



## ಜೆಟ್‌ಪ್ಯಾಕ್ ಆಯ್ಕೆ

ತೊಂದರೆಗಳು ಏನೇ ಇರಲಿ, ನೆಲದಲ್ಲಿ ಚಕ್ರ ಉರುಳದೆ ಮೇಲಿನಿಂದ ಹಾರಾಟ ನಡೆಸುವ, ಅದನ್ನು ವಾಣಿಜ್ಯ ಬಳಕೆಯ ಸಾಧನವನ್ನಾಗಿ ಮಾಡುವ ಪ್ರಯತ್ನಗಳು ನಡೆದೇ ಇವೆ. ಈ ನಿಟ್ಟಿನಲ್ಲಿ ನಡೆದಿರುವ ಇನ್ನೊಂದು ಪ್ರಯತ್ನ ವೈಯಕ್ತಿಕ ಜೆಟ್‌ಪ್ಯಾಕ್‌ಗಳ ಬಳಕೆ. ಇದನ್ನು ನೀವು ಜೇಮ್ಸ್‌ಬಾಂಡ್ ಅಥವಾ ರಾಕೆಟ್‌ಮ್ಯಾನ್ ಸಿನಿಮಾಗಳಲ್ಲಿ ನೋಡಿರುತ್ತೀರಿ. ದಿ ಜೆಟ್‌ಸನ್ಸ್ ಕಾರ್ಟೂನ್‌ಗಳಲ್ಲೂ ಗಮನಿಸಿರಬಹುದು. ನ್ಯೂಜಿಲೆಂಡಿನ ಮಾರ್ಟಿನ್ ಜೆಟ್‌ಪ್ಯಾಕ್ ಕಂಪೆನಿಯ ಮೈಕ್ ಟಾರ್ನಿಯರ್ ಈ ಜೆಟ್‌ಪ್ಯಾಕ್ ಸೌಲಭ್ಯದ ವಾಣಿಜ್ಯ ಬಳಕೆಯ ಬಗ್ಗೆ ಮಾತನಾಡಲು ಆರಂಭಿಸಿ 34 ವರ್ಷಗಳೇ ಉರುಳಿವೆ.

ಮಾರ್ಟಿನ್ ಜೆಟ್‌ಪ್ಯಾಕ್ ಕಂಪೆನಿ ಆರಂಭವಾದದ್ದು 1998ರಲ್ಲಿ. ಒಬ್ಬ ವ್ಯಕ್ತಿ ನಿಂತುಕೊಂಡು ಈ ವಾಹನದಲ್ಲಿ ಸುಮಾರು 30 ನಿಮಿಷಗಳ ಕಾಲ ಹಾರಾಟ ನಡೆಸಬಹುದು. 3000 ಅಡಿ ಎತ್ತರದಲ್ಲಿ ಗಂಟೆಗೆ 74 ಕಿ.ಮೀ ವೇಗದಲ್ಲಿ ಸಂಚರಿಸಬಹುದು. ಆದರೆ ಹೀಗೆ ಹಾರಾಡುವವನಿಗೆ ಕಂಪೆನಿಯ ಫ್ಲೈಟ್ ಸಿಮುಲೇಟರ್‌ನಲ್ಲಿ ತರಬೇತಿ ಅತ್ಯಗತ್ಯ. ಇದು ಸಾರ್ವಜನಿಕ ಬಳಕೆಯ ವಾಹನ ಆಗುವ ಸಾಧ್ಯತೆ ಕಡಿಮೆ, ಹೆಚ್ಚೆಂದರೆ ಮಿಲಿಟರಿಗಳಲ್ಲಿ ಅಥವಾ ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಬಳಕೆ ಆಗಬಹುದು. 2010ರಲ್ಲಿ ಜಗತ್ತಿನ 50 ಅತ್ಯುನ್ನತ ಸಂಶೋಧನೆಗಳಲ್ಲಿ ಒಂದೆಂಬ ಹೆಗ್ಗಳಿಕೆಯನ್ನು ಮಾರ್ಟಿನ್ ಜೆಟ್‌ಪ್ಯಾಕ್ ಗಳಿಸಿತ್ತು.

ಜೆಟ್‌ಪ್ಯಾಕ್‌ಗಳು ವಾಣಿಜ್ಯ ಬಳಕೆಗೆ ಆಗುವುದಿಲ್ಲ ಎನ್ನುವುದು ಖಚಿತವಾದ ಬಳಿಕ ಜಗತ್ತಿನ ಬಹುತೇಕ ಬಿಲಿಯಾಧಿಪತಿಗಳ ಕಣ್ಣು ಲ್ಯಾರಿ ಪೇಜ್‌ನ ಕಂಪೆನಿಗಳ ಮೇಲೆಯೇ ನೆಟ್ಟಿದೆ. ಒಟ್ಟು 9 ಕಂಪೆನಿಗಳು ಹಾರುವ